ನನಗೆ ವಿಜ್ಞಾನದಲ್ಲಿ ಹೆಚ್ಚು ಅಂಕಗಳು ಬರುತ್ತಿದ್ದರಿಂದ ಬೆಂಗಳೂರಿನ ನ್ಯಾಸ್ ಕಾಲೇಜಿನಲ್ಲಿ ಬಿ.ಎಸ್ಸಿ.ಗೆ ಸೇರಿಕೊಂಡು ಕಾಲೇಜ್ ಮುಂದುವರಿಸಿದೆ. ಬೆಂಗಳೂರು ಆ ಕಾಲಕ್ಕೆ ಕೆರೆ/ಸರೋವರಗಳ, ತೋಟಗಳ ನಗರವಾಗಿತ್ತು. ಮಧ್ಯೆಮಧ್ಯೆ ಹೂತೋಟಗಳು ಗುಡ್ಡಗಳು, ಗುಡ್ಡಗಳ ಮೇಲೆ ಸಣ್ಣಸಣ್ಣ ದೇವಸ್ಥಾನಗಳು ಇದ್ದವು. ವಿಶಾಲವಾದ ರಸ್ತೆಗಳು, ರಸ್ತೆಗಳ ಇಕ್ಕೆಲುಗಳಲ್ಲಿ ತಂಪು ನೀಡುವ ದೊಡ್ಡದೊಡ್ಡ ಮರಗಳು ಬೆಳೆದು ನಿಂತಿದ್ದವು. ಸಾಯಂಕಾಲವಾದರೆ ಚಳಿಗೆ ಗಡಗಡ ನಡುಗಿಹೋಗುತ್ತಿದ್ದೆವು. ಎಲ್ಲಿಗೆ ಹೋದರೂ ನಡೆದುಕೊಂಡೇ ಹೋಗಬೇಕು. ಎಷ್ಟು ದೂರ ನಡೆದರೂ ಆಯಾಸವೇ ಕಾಣಿಸುತ್ತಿರಲಿಲ್ಲ. ಅಲ್ಲೊಂದು ಇಲ್ಲೊಂದು ಸ್ಕೂಟರು, ಬಸ್ಸುಗಳನ್ನು ಬಿಟ್ಟರೆ ಸೈಕಲ್‌ಗಳು ಮತ್ತು ಕುದುರೆ ಬಂಡಿಗಳೇ ರಸ್ತೆಗಳಲ್ಲೆಲ್ಲ ಓಡಾಡುತ್ತಿದ್ದವು. ಮನೆಗಳು ತೋಟದ ಮನೆಗಳಂತೆ ಕಾಣಿಸುತ್ತಿದ್ದವು. ತೋಟದ ಮನೆ ಮಾಡುವ ಆಲೋಚನೆ ಆಗಲೇ ನನ್ನ ತಲೆಯಲ್ಲಿ ಹುಟ್ಟಿಕೊಂಡಿತು.

ಬ್ಯಾಚುಲರ್ ಪದವಿಯಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಗಣಿತಶಾಸ್ತ್ರಗಳನ್ನು ತೆಗೆದುಕೊಂಡಿದ್ದ ನನಗೆ ಭೌತಶಾಸ್ತ್ರ ಬಹಳ ಇಷ್ಟವಾದ ಮತ್ತು ಕುತೂಹಲವಾದ ವಿಷಯವಾಗಿತ್ತು. ಭೌತಶಾಸ್ತ್ರದಲ್ಲಿ ವಿಶ್ವದಲ್ಲಿನ ವಸ್ತುಗಳ ಬಗ್ಗೆ ತಿಳಿಯುವುದರೊಂದಿಗೆ ಬಾಹ್ಯಾಕಾಶದ ಚಲನೆ, ಅದರ ನಡವಳಿಕೆಯ ಜೊತೆಗೆ ಶಕ್ತಿ ಮತ್ತು ಬಲಗಳ ಬಗ್ಗೆಯೂ ತಿಳಿದುಕೊಳ್ಳಬೇಕಿದೆ. ಅಂದರೆ ಬ್ರಹ್ಮಾಂಡದ ವರ್ತನೆಯನ್ನು ಭೌತಶಾಸ್ತ್ರದ ಮೂಲಕ ತಿಳಿಯಬಹುದಾಗಿದೆ. ಭೌತಶಾಸ್ತ್ರ ಅತ್ಯಂತ ಹಳೆಯ ಶೈಕ್ಷಣಿಕ ವಿಷಯವಾಗಿದ್ದು ಇದು ಖಗೋಳಶಾಸ್ತ್ರದಿಂದ ಪ್ರಾರಂಭವಾಗಿದೆ. ಭೌತಶಾಸ್ತ್ರ ಸುಮಾರು ಎರಡು ಸಾವಿರ ವರ್ಷಗಳಿಂದಲೆ ನೈಸರ್ಗಿಕ ತತ್ವಶಾಸ್ತ್ರದೊಂದಿಗೆ ರಸಾಯನಶಾಸ್ತ್ರ, ಜೀವಶಾಸ್ತ್ರ ಮತ್ತು ಗಣಿತಶಾಸ್ತ್ರದ ಶಾಖೆಗಳೊಂದಿಗೆ ಬೆಸೆದುಕೊಂಡಿದೆ. ಭೂಮಿ, ಆಕಾಶ, ಪಂಚಭೂತಗಳು ಎಲ್ಲವೂ ಭೌತಶಾಸ್ತ್ರದಲ್ಲಿ ಆಶ್ಚರ್ಯಕರವಾಗಿ ವರ್ತಿಸುವುದು ತೋರುತ್ತದೆ. ಬ್ರಹ್ಮಾಂಡ ಯಾರಿಗೂ ಅರ್ಥವಾಗದ ಒಂದು ಅಗಾಧ ವಿಷಯವಾಗಿದೆ. ವಿಜ್ಞಾನಿಗಳು ಎಷ್ಟೇ ಬುದ್ಧಿವಂತರಾದರೂ ಇದುವರೆಗೂ ವಿಶ್ವದ ಕೇವಲ ಒಂದೆರಡು ಪಟ್ಟು ಅಂಶಗಳನ್ನು ಮಾತ್ರ ಅರಿಯಲು ಸಾಧ್ಯವಾಗಿದೆ ಎನ್ನಲಾಗುತ್ತದೆ.

....ನಾವು ಎಲ್ಲಿಂದ ಬಂದೆವು? ಈ ಭೂಮಿಗೆ ಏತಕ್ಕೆ ಬಂದೆವು? ಸತ್ತ ಮೇಲೆ ಎಲ್ಲಿಗೆ ಹೋಗುತ್ತೇವೆ? ಎನ್ನುವುದು ಇನ್ನೂ ನಮಗೆ ಅರ್ಥವಾಗಿಲ್ಲ. ಭೂಲೋಕ, ಯಮಲೋಕ, ಇಂದ್ರಲೋಕ ಇವೆಲ್ಲ ನಿಜವಾಗಿಯೂ ಇವೆಯೇ? ಗೊತ್ತಿಲ್ಲ. ನಾನು ಸಾಯುವುದಕ್ಕೆ ಮುಂಚೆ ಇದೇ ಭೂಮಿಯ ಮೇಲೆ ಬದುಕಿದ್ದಾಗ ಹಿಂದೂ, ಮುಸ್ಲಿಮ್, ಕ್ರೈಸ್ತ ಧರ್ಮದ ಗ್ರಂಥಗಳಲ್ಲಿ ಬರೆದಿರುವ ಪಾಪ, ಪುಣ್ಯ, ಕರ್ಮ, ಆತ್ಮ ಇತ್ಯಾದಿ ಕತೆಗಳನ್ನು ಬೇಕಾದಷ್ಟು ಕೇಳಿದ್ದೇನೆ ಮತ್ತು ಸಾಕಷ್ಟು ಓದಿದ್ದೇನೆ. ಎಲ್ಲಾ ಧರ್ಮ ಪುರಾಣಗಳಲ್ಲಿ ಇವುಗಳ ಬಗ್ಗೆ ವಾಕರಿಕೆ ಬರುವಷ್ಟು ಬರೆದುಬಿಟ್ಟಿದ್ದಾರೆ. ನಿಜವಾಗಿಯೂ ಹೀಗೆ ಬರೆದವರು ಯಾರಾದರೂ ಇವೆಲ್ಲವನ್ನು ನೋಡಿದ್ದಾರೆಯೇ? ಇಲ್ಲ ಅನುಭವಿಸಿದ್ದಾರೆಯೇ? ಅಥವಾ ಎಲ್ಲವೂ ಕೆಲವು ಜನರು, ಹಲವು ಜನರನ್ನು ಮೋಸ ಮಾಡಲು ಬರೆದಿಟ್ಟ ಬದನೆಕಾಯಿ ಪುರಾಣಗಳೆ? ನನಗೆ ಗೊತ್ತಿಲ್ಲ! ಆದರೆ ಕೆಲವನ್ನು ತಲೆ ಮೇಲೆ ಹೊಡೆದಂತೆ, ಅವುಗಳಿಗೆ ಏನೋ ಒಂದು ರೀತಿಯ ಸತ್ಯದ ಲೇಪ ಹೊದಿಸಿ, ಆಧ್ಯಾತ್ಮಿಕ ಕಥೆಗಳನ್ನು ಕಟ್ಟಿ ಓದುವ ಜನ ಸಾಮಾನ್ಯರನ್ನು ಮರುಳು ಮಾಡಲಾಗಿದೆ. ಇವರಿಗೆ ವಿರುದ್ಧವಾಗಿ ಇವರ ಬೊಗಳೆ ಭಂಡತನಗಳನ್ನು ಕಾಲಕಾಲಕ್ಕೆ ಎತ್ತಿ ತೋರಿಸಿದ ಲೋಕಾಯತ, ಚಾರ್ವಾಕ, ಸರ್ವಜ್ಞ ಇತ್ಯಾದಿ ಬಂಡಾಯಗಾರರನ್ನು ಚರಿತ್ರೆಯಲ್ಲಿ ನಾವು ನೋಡಬಹುದಾಗಿದೆ.

***

ಸತ್ತ ಮೇಲಾದರೂ ನನಗೆ ಕೆಲವು ವಿಷಯಗಳು ತಿಳಿಯುತ್ತದೆ ಎಂದುಕೊಂಡಿದ್ದೆ. ಆದರೆ ಸತ್ತ ಮೇಲೂ ಇದುವರೆಗೂ ಯಾವ ವಿಷಯವೂ ನನಗೆ ಗೊತ್ತಾಗುತ್ತಿಲ್ಲ. ಮುಂದೆ ಕೆಲವು ವಿಷಯಗಳನ್ನಾದರೂ ನೋಡುತ್ತೇನೊ ಇಲ್ಲವೊ ಗೊತ್ತಿಲ್ಲ. ನನಗೆ ತಿಳಿದರೂ ನಿಮಗೆ ಹೇಳುವ ಪರಿಸ್ಥಿತಿ ಬರುವುದಾದರೂ ಹೇಗೆ ಎನ್ನುವ ಆಲೋಚನೆ ನನ್ನನ್ನು ಗಾಢವಾಗಿ ಕಾಡುತ್ತಿದೆ. ನನ್ನ ಆತ್ಮವೋ ಪ್ರೇತಾತ್ಮವೊ ಮೋಟು ಗೋಡೆಯ ಮೇಲೆ ಕುಳಿತುಕೊಂಡಿದೆ. ನನಗೆ ಏನು ಮಾಡಬೇಕೊ ತಿಳಿಯುತ್ತಿಲ್ಲ. ಎದ್ದೇಳಲೂ ಸಹ ಆಗುತ್ತಿಲ್ಲ. ಈ ಸ್ಥಿತಿ ಎಷ್ಟು ಸಮಯ ಇರುತ್ತದೊ ಅದೂ ಗೊತ್ತಿಲ್ಲ. ನನ್ನ ಎದುರಿಗೆ ನನ್ನ ಪ್ರಾಣವಿಲ್ಲದ ಶರೀರರ ಮುಂದೆ ಬ್ರ್ಯಾಂಡಿ ಕುಡಿದಿರುವ ಹುಡುಗರು ರಾಮ ಗೋವಿಂದ ನಾರಾಯಣ... ಎನ್ನುತ್ತ ಸಣ್ಣಪುಟ್ಟ ವಾದ್ಯಗಳಿಂದ ಸದ್ದು ಮಾಡುತ್ತ ಏನೇನೋ ಹಾಡುಗಳನ್ನು ಹಾಡುತ್ತಿದ್ದಾರೆ. ನನ್ನ ಕುಟುಂಬದವರು, ಕೆಲವು ಸಂಬಂಧಿಗಳು ನನ್ನ ಸುತ್ತಲೂ ಕುಳಿತು, ನಿಂತು ನನ್ನ ಬಗ್ಗೆಯೇ ಮಾತನಾಡಿಕೊಳ್ಳುತ್ತಿದ್ದಾರೆ. ಕೆಲವು ಹೆಣ್ಣು ಮಕ್ಕಳು ಆಗಾಗ ಜೋರಾಗಿ ಅಳುತ್ತ ಪ್ರಾಣವಿಲ್ಲದ ನನ್ನ ಮುಖವನ್ನೇ ನೋಡುತ್ತಿದ್ದಾರೆ. ಕೆಲವರು ನನ್ನ ಗುಣಗಾನ ಮಾಡುತ್ತಿದ್ದಾರೆ.

ಕುಡುಕನಾದ ವಂಡ್ರಕಣ್ಣು ಕೆಂಚಪ್ಪ ಮಧ್ಯೆಮಧ್ಯೆ ದೆವ್ವ ಬಂದಂತೆ `ಅಯ್ಯೋ ಮಾವ. ನನಗೆ, ಇನ್ನು ಯಾರು ಮಾವ ಕೇಳಿದಾಗ ಕುಡಿಯುವುದಕ್ಕೆ ಹಣ ಕೊಡೋರು? ವಾರಕ್ಕೆ ಎರಡು ಸಲಾನಾದ್ರು ಕುಡಿಯುವುದಕ್ಕೆ ಹಣ ಕೊಡುತ್ತಿದ್ದೀಯಲ್ಲ ಮಾವ' ಎಂದು ಗೋಳಾಡುತ್ತಿದ್ದಾನೆ. ಅವನು ದಿನದಲ್ಲಿ ಮೂರು ನಾಲ್ಕು ಸಲವಾದರೂ ಕುಡಿದು ಎಲ್ಲೆಂದರಲ್ಲಿ ದೆವ್ವ ಬಂದವನಂತೆ ಕಣ್ಣು ಮುಚ್ಚಿಕೊಂಡು, ಬಾಯಿ ತೆರೆದುಕೊಂಡು ತೂರಾಡುತ್ತ ಎದ್ದು ಬಿದ್ದು ಓಡಾಡುತ್ತ ಎಲ್ಲೆಂದರಲ್ಲಿ ಕುಳಿತು ನಿಂತು ಮಲಗಿರುತ್ತಾನೆ. ಎಷ್ಟೇ ಟೈಟಾಗಿ ಕುಡಿದು ತೂರಾಡುತ್ತಿದ್ದರೂ ಟವಲ್ ಮತ್ತು ಚಪ್ಪಲಿಯನ್ನು ಮಾತ್ರ ಜೋಪಾನವಾಗಿ ಇಟ್ಟುಕೊಂಡಿರುತ್ತಾನೆ. ಮಲಗಿದ್ದವನು ಎದ್ದು ಮತ್ತೆ `ಅಯ್ಯೋ ಮಾವ ಇನ್ನು ಕುಡಿಯುವುದಕ್ಕೆ ನನಗೆ ಹಣ ಕೊಡೋರು? ಯಾರ ಮಾವ?' ಎನ್ನುತ್ತಿದ್ದಂತೆ, ಒಬ್ಬ `ಇವ್ನ ಏನು ಮಾಡೋದು?' ಎಂದರೆ, ತರ್ಲೆ ಯುವಕನೊಬ್ಬ, `ಮಲಗಪ್ಪ ಕೆಂಚಪ್ಪ. ನಾಳೆ ಮಾವ್ನ ಜೊತೇನೇ ನಿನ್ನನ್ನು ಕಳುಸ್ತೀವಿ' ಎಂದ. ಮಹಿಳೆಯೊಬ್ಬರು, `ಏಯ್ ಥೂ ನಿನ್ನ ಬಾಯಲ್ಲಿ ಮಣ್ಣಾಕ ಸುಮ್ಮನೆ ಇರೊ' ಎಂದಳು ಕೆಂಚಪ್ಪನಿಗೆ.

ನನ್ನ ಪತ್ನಿ ನಾನು ಸತ್ತಾಗಿಂದಲೂ ಅಳುತ್ತಾ ಅಳುತ್ತಾ ಮೊಬೈಲ್ ಫೋನ್‌ನಲ್ಲಿ ಮಗ ಮತ್ತು ಮಗಳ ಜೊತೆಗೆ ಹಲವಾರು ಸಲ ವಾಟ್ಸ್‌ಆಪ್ ಫೋನ್ ಮೂಲಕ ಮಾತನಾಡಿ `ಮಗನೂ ಬರೂವುದಕ್ಕಾಗುವುದಿಲ್ಲ. ಮಗಳೂ ಬರೂವುದಕ್ಕಾಗುವುದಿಲ್ಲ. ದೇವರು ನನ್ನ ಗಂಡನಿಗೆ ಇಂತಹ ಸಾವು ಕೊಡಬಾರದಿತ್ತು' ಎಂದು ಗೋಳಾಡುತ್ತಿದ್ದಳು. ಮಧ್ಯೆಮಧ್ಯೆ `ಅಯ್ಯೊ, ದೇವರು ನನ್ನನ್ನು ಮೊದಲು ಕರ್ಕೊಂಡು ಹೋಗ್ಬಾರದೇ? ಒಬ್ಬಳೇ ನಾನು ಹೇಗೆ ಬದುಕುವುದು?' ಎಂದು ಹತ್ತಾರು ಸಲ ಮೂರ್ಛೆ ಹೋದಂತಾಗಿದ್ದಾಳೆ. ಮಹಿಳೆಯರು ಅವಳಿಗೆ ಆಗಾಗ ಗಂಜಿ, ಜ್ಯೂಸ್, ನೀರು ಕುಡಿಸಲು ಪ್ರಯತ್ನ ಮಾಡುತ್ತಿದ್ದಾರೆ. ಆಕೆ ಏನನ್ನೂ ತೆಗೆದುಕೊಳ್ಳಲಿಲ್ಲ.

ನನಗೆ ಮಾತ್ರ ಇಡೀ ರಾತ್ರಿ ಇನ್ನೂ ಏನೇನು ನಡೆಯುತ್ತದೊ ನೋಡಬೇಕು ಎನ್ನುವ ಕುತೂಹಲ ಹುಟ್ಟಿದೆ. ನನ್ನ ಮೇಲೆ ಹೊದಿಸಿದ್ದ ಬಟ್ಟೆಯನ್ನು ನನ್ನ ಅಣ್ಣನ ಮಗ ಸರಿಪಡಿಸಿದ. ದೂರ ನಿಂತಿರುವ ಹುಡುಗರಲ್ಲಿ ಒಬ್ಬ `ಈ ಮುದುಕಪ್ಪನಿಗೆ ಎಷ್ಟು ವಯಸ್ಸಾಗಿರುಬಹುದು?' ಎಂದರೆ `ಮುಕ್ಕಾಲು ಸೆಂಚುರಿ ಹೊಡೆದಿದ್ದಾನೆ ಮುದುಕ' ಎಂದ ಇನ್ನೊಬ್ಬ ಯುವಕ. ಆದರೆ ನನಗೆ ಇನ್ನೂ ಎಪ್ಪತ್ತು ವರ್ಷಗಳು ಮಾತ್ರ. ಮೊದಲು ಮಾತನಾಡಿದ ಯುವಕ ಮತ್ತೆ `ಈ ಮುದುಕ ಇಲ್ಲೇ ಫಾರ್ಮ್‌ಹೌಸ್‌ನಲ್ಲಿ ದೆವ್ವ ಆಗ್ತಾನೆ' ಎಂದ. `ಏ ಮುದುಕರು ಎಲ್ಲಿ ದೆವ್ವ ಆಗ್ತಾರೆ, ಸುಮ್ಮನೆ ಇರೊ. ಯಾರಾದರೂ ಹುಡುಗರೊ ಹುಡುಗಿಯರೊ ಸತ್ತರೆ ದೆವ್ವ ಆಗ್ತಾರೆ' ಎಂದ.

ಬೆಂಗಳೂರಿನಿಂದ ಬಂದಿದ್ದ ನನ್ನ ತಮ್ಮನ ಎರಡನೇ ಮಗ, ಅಮೆರಿಕದಲ್ಲಿದ್ದ ನನ್ನ ಮಗ ತೇಜಸ್ ಮತ್ತು ಮಗಳು ದಮಯಂತಿಯ ಜೊತೆಗೆ ಮಾತನಾಡುತ್ತ ವಾಟ್ಸ್‌ಆಪ್‌ನಲ್ಲಿ ನನ್ನ ಹೆಣವನ್ನು ತೋರಿಸುತ್ತಿದ್ದ. ಕತ್ತಲಲ್ಲಿ ನನ್ನ ಹೆಣದ ಮುಖ ಸರಿಯಾಗಿ ಕಾಣಿಸದ ಕಾರಣ ಇನ್ನೊಬ್ಬ ಹುಡುಗ ನನ್ನ ಮುಖಕ್ಕೆ ಬ್ಯಾಟರಿಯಿಂದ ಬೆಳಕು